# ಟಿ.ಇ.ಟಿ. ಪ್ರಾಥಮಿಕ ಶಾಲಾ ಶಿಕ್ಷಕ – 2014

# ಪ್ರಥಮ ಭಾಷೆ – ಕನ್ನಡ

ಸೂಚನೆ: ಕೆಳಗಿನ ಪದ್ಯವನ್ನು ಓದಿ, 1 ರಿಂದ 7ರವರೆಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಬೆಳಗುತಿರೆ ಬೆಳಕೆ

ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ
ಶ್ರಾವಣದ ಶುಭದಿನದ ಎಮೆದೆರೆದ ಬೆಳಕೇ
ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೇ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ ||
ತೈಲ ತೀರಿದರುಂಟು ದುಡಿದವವರ ಬೆಮರು
ಬತ್ತಿಯಿದೆ ಮೊತ್ತದಲ್ಲಿ ಮಡಿದವರ ಕರುಳು
ನಿನ್ನೊಡಲ ಬಟ್ಟಲಿಗೆ ಕೋಟಿ ಮಕ್ಕಳ ಉಸಿರು
ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೇ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ
ಗಣತಂತ್ರದಟ್ಟಣೆಯ ವಿಸ್ತ್ರತದ ಗಂಧಕುಟಿ
ಜನಮನವೆ ವೇದಿಕೆಯು ವೈಜಯಂತಿ!
ಸಕಲ ಸೌಹಾರ್ದಾ ಸಮಬಾಳು ನಿಮ್ಮ ಗುಡಿ
ಸತ್ಯ ಸೂರ್ಯನ ತೇಜ ನಿನದಾಯ್ತು ಪ್ರಣತಿ
ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೇ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ
ಬೆಳಗುತಿರು ಜಗದೊಡಲ ಚೆಲುವಿಕೆಯ ಚೇತನವೇ!
ಬೆಳಗುತಿರು ಕವಿ ಸವಿದ ಸುಸ್ಕೃತಿಯ ಸೌರಭವೆ !
ಬೆಳಗುತಿರು ರಾಷ್ಟ್ರಕನ ನಡುಸುತಿಹ ಹೊಂಬೆಳಕೆ !
ಬೆಳಗುತಿರು ಅಭಿಜಾತ ಸ್ವಾತಂತ್ರ್ಯದ ಹಣತೆ!
ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೇ
ಬೆಳಗುತಿರು ಬಾರತದ ಬಿಡುಗಡೆಯ ಬೆಳಕೇ||

1. ಬಿಡುಗಡೆಯ ಬೆಳಕಿನ ಜ್ಯೋತಿಯು ಹೀಗಿದೆ:
   1) ಜನರ ವೇದಿಕೆಯ ವೈಜಂತಿಯಾಗಿ
   2) ಗಣತಂತ್ರದಟ್ಟಣೆಯ ಗಂಧಕುಟಿಯಾಗಿ
   3) ದಿನಕರನ ಬೆಳಕಿನ ಹೊಂಗಿರಣವಾಗಿ
   4) ಸಕಲ ಸೌಹಾರ್ದದ ಸಮಬಾಳಾಗಿ
2. ಚೆಲುವಿಕೆಯ ಚೇತನವು ಕವಿಗೆ ಕಂಡಿದ್ದು
   1) ಸತ್ಯ ಸೂರ್ಯನ ತೇಜದಲ್ಲಿ
   2) ಪ್ರಪಂಚದ ಉದರದಲ್ಲಿ
   3) ರಾಷ್ಟ್ರಭಕ್ತನ ಎದೆಯಲ್ಲಿ
   4) ಜನಮನದ ಹೃದಯದಲ್ಲಿ
3. 'ಉತ್ತಮ ಕುಲದಲ್ಲಿ ಹುಟ್ಟಿದುದು' ಎಂಬರ್ಥವನ್ನು ನೀಡದ ಪದ
   1) ವೈಜಯಂತಿ 2) ಅಭಿಜಾತ
   3) ಗಂಧಕುಟಿ 4) ಸೂರ್ಯತೇಜ
4. ಶ್ರಾವಣ ಮಾಸ ಕವಿಗೆ ಶುಭವಾಗಿ ಕಾಣಲು ಕಾರಣ:
   1) ಸ್ವಾತಂತ್ರ್ಯದ ಹಣತೆ ಹೊತ್ತಿಕೊಂಡ ತಿಂಗಳಾಗಿರುವುದು
   2) ಭಾರತದ ಬಿಡುಗಡೆಯ ಬೆಳಕು ಹೊತ್ತಿದ ತಿಂಗಳಾಗಿರುವುದು
   3) ಅಷಾಡ ಮಾಸ ಕಳೆದು ಶ್ರಾವಣ ಬಂದಿರುವುದು
   4) ಹೆಚ್ಚಿನ ಭಾರತೀಯ ಹಬ್ಬಗಳು ಈ ತಿಂಗಳು ಬಂದಿರುವುದು
5. ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದವರ ಕರುಳು ಕವಿಯ ದೃಷ್ಟಿಯಲ್ಲಿ ಹೀಗಿದೆ:
   1) ಜನರ ಮನಸ್ಸಿನ ಬೆಳಕಾಗಿ
   2) ದುಡಿಯದವರ ದೇಹದ ಬೆವರಾಗಿ
   3) ಕೋಟಿ ಕೋಟಿ ಮಕ್ಕಳ ಉಸಿರಾಗಿ
   4) ಸ್ವಾತಂತ್ರ್ಯ ಹಣತೆಯ ಬತ್ತಿಯಾಗಿ
6. ನಿನ್ನೊಡಲ ಬಟ್ಟಲಿಗೆ ಕೋಟಿ ಮಕ್ಕಳ ಉಸಿರು ಮೀಸಲಿದೆ ಓ ಬೆಳಕೆ ಆ ಹುತಾತ್ಮರ ಮಡಿಲು ಈ ಸಾಲುಗಳಲ್ಲಿ ಚತುರ್ಥಿ ವಿಭಕ್ತಿ ಪ್ರತ್ಯಯವನ್ನು ಹೊಂದಿರುವ ಪದ:
   1) ಉಸಿರು 2) ಹುತಾತ್ಮರ

3) ಬಟ್ಟಲಿಗೆ 4) ಮೀಸಲಿದೆ

7. ಈ ಕೆಳಗಿನ ಪದಗಳಲ್ಲಿ ಸಜಾತಿ ಸಂಯುಕ್ತಾಕ್ಷರದ ಪದ:

1) ವೈಜಯಂತಿ 2) ನಿನ್ನೊಡಲು

3) ಸುಸ್ಮೃತಿ 4) ನಿನದಾಯ್ತು

ಕೆಳಗೆ ನೀಡಿದ ಪರಿಚ್ಛೇದವನ್ನು ಓದಿ, ನಂತರ 8 ರಿಂದ 15ರವರೆಗಿನ ಪ್ರಶ್ನೆಗಳಿಗೆ ಉತ್ತರಿಸಿ.

'ಜನಪ್ರಿಯತೆ' ಎಂಬ ಪದ ಈಚೀಚೆಗೆ ಬಹಳ ಅನರ್ಥಕಾರಿಯಾಗುವಂತೆ ತೋರುತ್ತದೆ. 'ಜನಪ್ರಿಯತೆ' ಎಂದರೇನು? ಆ ಜನರಾದರೂ ಯಾರು? ಜನರೆಲ್ಲರೂ ಮೆಚ್ಚಿದ ಹೊರತು ಆ ಕಾವ್ಯ ಉತ್ತಮ ಕಾವ್ಯವಲ್ಲ ಎಂದು ಹೇಳುವುದಾದರೆ ಉತ್ತಮ ಕಾವ್ಯಗಳೇ ಅಸಾಧ್ಯ ಎಂದು ಹೇಳಬೇಕಾಗುತ್ತದೆ. ಉತ್ತಮ ಕಲಾಕಾರ್ಯದ ಸವಿಯನ್ನು ಆಸ್ವಾದಿಸುವ ಪುಣ್ಯವೂ ಸಾಮರ್ಥ್ಯವೂ ಪುಕ್ಕಟೆಯಾಗಿ ಬರುವುದಿಲ್ಲ. ಅದಕ್ಕೆ ಸಂಸ್ಕಾರವೂ ಅಭ್ಯಾಸವೂ ಎರಡೂ ಅವಶ್ಯಕ. ಪ್ರಕೃತಿ ಸೌಂದರ್ಯ - ಸೂರ್ಯ ಚಂದ್ರರ ಉದಾಯಾಸ್ತಗಳು, ವಸಂತಮಾಸದ ವನಶ್ರೀ, ಬತ್ತದ ಗದ್ದೆಗಳ ಪೈರುಪಚ್ಚೆ, ಮುಂಗಾರಿನ ಕರ್ಮುಗಿಲು, ಕಣಿವೆಗಳಲ್ಲಿ ಸಮುದ್ರ ಸರೋವರಗಳನ್ನು ವಿರಚಿಸುವ ಮಾಗಿಯ ಮಂಜಿನ ಮಾಯಾ ಮೋಹ, ಇತ್ಯಾದಿ ಸಹಸ್ರಾರು ದೃಶ್ಯಗಳು ದಿನ ದಿನವೂ ಜನಗಳ ಕಣ್ಣೆದುರು ಸುಳಿಯುತ್ತಿವೆ. ಆದರೆ ಎಷ್ಟು ಮಂದಿ ಅವುಗಳನ್ನು ವರ್ಡ್ಸ್‌ವರ್ತ್ ಕವಿಯಂತಾಗಲಿ, ವರ್ಣಶಿಲ್ಪಿ ವೆಂಕಟಪ್ಪನವರಂತಾಗಲಿ ಕಂಡುಕಾಣಲು ಸಮರ್ಥರಾಗಿದ್ದಾರೆ? ಕಲೆಯನ್ನು ಸವಿಯಲು ಕಲಾದೃಷ್ಟಿ ಬೇಕು. ಕವಿ ತನ್ನ ಪ್ರತಿಭೆಗೆ, ತನ್ನ ಕಲ್ಪನೆಗೆ, ತನ್ನ ಭಾವಕ್ಕೆ ಗೋಚರವಾಗುವ ಸೃಷ್ಟಿಯ ರಹಸ್ಯ ಆನಂದ ಸೌಂದರ್ಯಗಳನ್ನು ಕೈಲಾದಮಟ್ಟಿಗೂ ತನ್ನ ಕೃತಿಯಲ್ಲಿ ಪ್ರತಿಬಿಂಬಿಸಲು, ನಿಹಿತಗೈಯಲು ಸಾಹಸ ಮಾಡುತ್ತಾನೆ ಅಂತಹ ಕೃತಿ ಹೊಸದಾಗಿರುವಾಗ ಜನರಿಗೆ ಅದು ರುಚಿಸದೆ ಹೋಗಬಹುದು: ಅರ್ಥವಾಗದಿರಬಹುದು. ಆಗ ಅವರು ಅದನ್ನು ತಿರಸ್ಕರಿಸುವುದೂ ಹೀಯಾಳಿಸುವುದೂ ಸ್ವಾಭಾವಿಕ. ಹಾಗೆಂದು ಆ ಕಲಾಕೃತಿಯನ್ನೇ ಅಲ್ಪವೆಂದು ಅಲ್ಲಗಳೆಯುವುದಕ್ಕೆ ಆಗುತ್ತದೆಯೇ? ನೂತನವಾದುದರಲ್ಲಿ ಜನರಿಗೆ ಸಂಶಯ ಹೆಚ್ಚು. ಆ ಸಂಶಯ ಮೊದಮೊದಲು ಔದಸೀನ್ಯ. ತಿರಸ್ಕಾರಗಳ ರೂಪದಲ್ಲಿ ತೋರುತ್ತದೆ. ಎಲ್ಲಿಯೋ ಹಲಕೆಲವು ಕಲಾವಿದರಿಗೆ ಮಾತ್ರ ಅದರ ಮಹತ್ತು ತಿಳಿಯುತ್ತದೆ.

8. ಜನರು ಒಂದು ಕೃತಿಯನ್ನು ತಿರಸ್ಕರಿಸಲು ಕಾರಣ

1) ಕೃತಿಯು ಅಸ್ವಾಭಾವಿಕತೆಯಿಂದ ಕೂಡಿರುವುದು

2) ಕೃತಿಯ ಎತ್ತರಕ್ಕೆ ಏರಲು ಜನರಿಗೆ ಸಾಧ್ಯವಾಗದಿರುವುದು

3) ಜನರಿಗೆ ಕಲಾ ದೃಷ್ಟಿ ಇಲ್ಲದಿರುವುದು

4) ಜನರಿಗೆ ಕವಿಯ ಕಲ್ಪನೆ ಮತ್ತು ಪ್ರತಿಭೆ ಅರ್ಥವಾಗದಿರುವುದು

9. ಉತ್ತಮ ಕಲಾಕಾರ್ಯದ ಸವಿಯನ್ನು ಸವಿಯುವ ಸಾಮರ್ಥ್ಯ ಬರಬೇಕಾದರೆ:

1) ಬುದ್ದಿವಂತಿಕೆ ಇರಬೇಕು

2) ಕಲಾಭಿವ್ಯಕ್ತಿ ಸಾಮರ್ಥ್ಯ ಇರಬೇಕು

3) ನಿರಂತರ ಅಭ್ಯಾಸ ಅವಶ್ಯಕ

4) ಆಸ್ವಾದಿಸುವ ಗುಣ ಅವಶ್ಯಕ

10. ಜನ ಸಾಮಾನ್ಯರ ನಡುವೆ ಕವಿ ವಿಶೇಷವಾಗಿ ಕಾಣಲು ಕಾರಣ:

1) ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುವುದು

2) ಪ್ರಕೃತಿಯ ಆಗು ಹೋಗುಗಳಿಗೆ ತಕ್ಷಣ ಸ್ಪಂದಿಸುವುದು

3) ಪ್ರಕೃತಿ ಸೌಂದರ್ಯವನ್ನು ತನ್ನ ಕೃತಿಯಲ್ಲಿ ಪ್ರತಿಬಿಂಬಿಸುವುದು

4) ಕಲೆಯನ್ನು ಸವಿಯುವ ಕಲಾದೃಷ್ಟಿ ಇರುವುದು

11. ಈ ಕೆಳಗಿನ 'ಎ' ಮತ್ತು 'ಬಿ' ಪಟ್ಟಿಗೆ ಸರಿ ಹೊಂದುವ ಸೂಚಿಯನ್ನು ಗುರುತಿಸಿ

| | ಎ | ಬಿ |
|---|---|---|
| 1. | ಪ್ರಥಮ ವಿಭಕ್ತಿ | ಎ. ಕೃತಿಯಿಂದ |
| 2. | ದ್ವಿತೀಯ ವಿಭಕ್ತಿ | ಬಿ. ಎತ್ತರಕ್ಕೆ |
| 3. | ತೃತೀಯ ವಿಭಕ್ತಿ | ಸಿ. ಜನಪ್ರಿಯತೆಯು |
| 4. | ಚತುರ್ಥಿ ವಿಭಕ್ತಿ | ಡಿ. ಕೃತಿಯಲ್ಲಿ |
| | | ಇ. ಕಲಾಕೃತಿಯನ್ನು |

ಈ ಕೆಳಗೆ ನೀಡಿರುವ ಪಟ್ಟಿಯಲ್ಲಿ ಸೂಕ್ತ ಉತ್ತರ ಗುರುತಿಸಿ

1) 1-ಇ, 2-ಎ, 3-ಸಿ, 4-ಬಿ

2) 1-ಸಿ, 2-ಇ, 3-ಸಿ, 4-ಡಿ

3) 1-ಸಿ, 2-ಡಿ, 3-ಎ, 4-ಡಿ

4) 1-ಸಿ, 2-ಇ, 3-ಎ, 4-ಬಿ

12. ಈ ಕೆಳಗಿನ ಪದಗಳಲ್ಲಿ ಶುದ್ಧರೂಪ ಪದಗಳನ್ನು ಹೊಂದಿರುವ ಸೂಚಿ:

ಎ. ಹಾರ್ದಿಕ ಬಿ. ಉಚ್ಚಾರಣೆ

ಸಿ. ಕೃತಿ ಡಿ. ಕಲಾದೃದಷ್ಟಿ

1) ಎ, ಬಿ, ಸಿ 2) ಎ, ಬಿ,ಡಿ

3) ಎ, ಸಿ, ಡಿ 4) ಬಿ,ಡಿ,ಎ

13. ಉತ್ತಮ ಕಾವ್ಯದ ಲಕ್ಷಣ

1) ಜನಪ್ರಿಯವಾಗಿರುವುದು

2) ಜನಪ್ರಿಯವಾಗಿಲ್ಲದಿರುವುದು

3) ಸೃಷ್ಟಿಯ ರಹಸ್ಯ ಮತ್ತು ಸೌಂದರ್ಯವನ್ನು ಪ್ರತಿಬಿಂಬಿಸುವುದು

4) ಜನಸಾಮಾನ್ಯರೆಲ್ಲರಿಗೂ ಅರ್ಥೈಸಲು ಯಶಸ್ವಿ ಆಗಿರುವುದು

14. 'ಸೃಷ್ಟಿಯ ರಹಸ್ಯ' ಈ ಪದದಲ್ಲಿನ ಅಕ್ಷರಗಳನ್ನು ಬಿಡಿಸಿ ಬರೆದಾಗ.

1) ಸ್+ ಋ+ ಷ್+ ಟ್+ ಇ +ಯ್+ ಅ +ರ್ +ಅ +ಹ್ +ಅ +ಸ್+ ಯ್+ ಅ

2) ಸ್ +ಋ ಷ್ +ಟ್ +ಇ, ಯ್+ ಅ,ರ್ +ಅ, ಹ್+ ಅ, ಸ್ +ಯ್+ ಅ

3) ಸ್ +ರ್ +ಅ, ಷ್ +ಟ್ +ಇ, ಯ್ +ಅ,ರ್ +ಅ, ಹ್ +ಅ, ಸ್ +ಯ್ +ಅ

4) ಸ್ +ಋ +ಷ್ +ಟ್ +ಇ +ಯ್ +ಅ,ರ್ +ಅ +ಹ್+ ಅ +ಸ್ +ಯ್ + ಅ

15. ಕವಿ ತನ್ನ ಕಾವ್ಯದಲ್ಲಿ ಇದನ್ನು ಪ್ರತಿಬಿಂಬಿಸಲು ಪ್ರಯತ್ನಿಸುತ್ತಾನೆ.

1) ಪ್ರಕೃತಿಯ ವೈರುದ್ಯಗಳನ್ನು

2) ತನ್ನ ಕಷ್ಟ –ಕಾರ್ಪಣ್ಯಗಳನ್ನು

3) ಜನರಿಗೆ ಅರ್ಥವಾಗುವ ಪ್ರಕೃತಿಯ ಸೌಂದರ್ಯವನ್ನು

4) ಪ್ರಕೃತಿಯ ಸೌಂದರ್ಯ, ರಹಸ್ಯಗಳನ್ನು

16. ಒಂದು ಭಾಷೆಯನ್ನು ಕಲಿಯುವ ಸರಿಯಾದ ಕ್ರಮ:

1) ಮಾತನಾಡುವುದು – ಆಲಿಸುವುದು – ಓದುವುದು – ಬರೆಯುವುದು

2) ಆಲಿಸುವುದು – ಓದುವುದು – ಮಾತನಾಡುವುದು – ಬರೆಯುವುದು

3) ಬರೆಯುವುದು – ಓದುವದು – ಮಾತನಾಡುವುದು – ಆಲಿಸುವುದು

4) ಆಲಿಸುವುದು – ಮಾತನಾಡುವುದು – ಓದುವುದು – ಬರೆಯುವುದು

17. ಮಕ್ಕಳು ಸಹಜವಾಗಿ ಭಾಷೆಯನ್ನು ಇದರ ಮೂಲಕ ಕಲಿಯುತ್ತಾರೆ

1) ಅನುಕರಣೆಯ ಮೂಲಕ

2) ಆಲಿಸುವ ಮೂಲಕ

3) ಮಾತನಾಡುವ ಮೂಲಕ

4) ಅರ್ಥೈಸಿಕೊಳ್ಳುವ ಮೂಲಕ

18. ಮಕ್ಕಳ ಕಲಿಕೆ ಬಲಗೊಳ್ಳುವುದನ್ನು ಪ್ರತಿಪಾದಿಸುವ ತತ್ವ (ನಿಯಮ)

1) ಅನುಕರಣ ನಿಯಮ

2) ಅಭ್ಯಾಸ ನಿಯಮ

3) ಅನುಕ್ರಮಣಿಕೆ ನಿಯಮ

4) ಸಿದ್ಧತಾ ನಿಯಮ

19. ಒಂದು ಭಾಷೆಯನ್ನು ಕಲಿಯಬೇಕಾದರೆ ಮೊದಲು ನಾವು

1) ಭಾಷೆಯ ಅಕ್ಷರಗಳನ್ನು ಗುರುತಿಸುವಂತಾಗಬೇಕು

2) ಭಾಷೆಯ ವ್ಯಾಕರಣವನ್ನು ಕಲಿತಿರಬೇಕು

3) ಭಾಷೆಯನ್ನಾಡುವ ಜನರ ನಡುವೆ ನಾವು ಜೀವಿಸಬೇಕು

4) ಭಾಷೆಯ ಧ್ವನಿಗಳನ್ನು ಗುರುತಿಸಸುವಂತಾಗಬೇಕು

20. ಉತ್ತಮ ಮಾತುಗಾರಿಕೆಯ ಪ್ರಧಾನ ಲಕ್ಷಣ

1) ಧ್ವನಿ ಸಂಕೇತಗಳ ಮೂಲಕ ಪ್ರಕಟಗೊಂಡಿರಬೇಕು

2) ಧ್ವನಿ, ಅರ್ಥ, ಭಾವನೆಗಳು ಸಮನ್ವಯ – ಗೊಂಡಿರಬೇಕು

3) ಕೆಲವು ಅವಧಿಗಳನ್ನು ವ್ಯಾಕರಣಕ್ಕೆ ಮೀಸಲಿಟ್ಟು ಕಲಿಸುವುದು

4) ಕಲಿಕಾ ಪ್ರಕ್ರಿಯೆಯೊಂದಿಗೆ ವ್ಯಾಕರಣವನ್ನು ಸಮ್ಮಿಳಿತಗೊಳಿಸಿ ಕಲಿಸುವುದು

21. ಕ್ರಿಯಾತ್ಮಕ ವ್ಯಾಕರಣ ಎಂದರೆ

1) ವ್ಯಾಕರಣವನ್ನು ಪ್ರತ್ಯೇಕ ಅವಧಿಗಳಲ್ಲಿ ಕಲಿಸುವುದು

2) ಸಾಂಪ್ರದಾಯಿಕ ಪದ್ಧತಿಯಲ್ಲಿ ವ್ಯಾಕರಣವನ್ನು ಕಲಿಸುವುದು

3) ಕೆಲವು ಅವಧಿಗಳನ್ನು ವ್ಯಾಕರಣಕ್ಕೆ ಮೀಸಲಿಟ್ಟು ಕಲಿಸುವುದು

4) ಕಲಿಕಾ ಪ್ರಕ್ರಿಯೆಯೊಂದಿಗೆ ವ್ಯಾಕರಣ ಸಮ್ಮಿಳಿತಗೊಳಿಸಿ ಕಲಿಸುವುದು

22. ಕುರುಕ್ಷೇತ್ರದಲ್ಲಿ ಕೌರವರು ಪಾಂಡವರೊಡನೆ ಯುದ್ಧ ಮಾಡಿ 'ಸರ್ವನಾಶ' ಹೊಂದಿದರು. ಗೆರೆ ಎಳೆದ ಪದದ ಅರ್ಥ ಕೊಡುವ ನುಡಿಗಟ್ಟು

1) ಮೂಗಿನ ತುದಿಗೆ ಸುಣ್ಣ ಹಚ್ಚು

2) ಶಸ್ತ್ರ ನೆಲ್ಕಕೆ ಹಾಕು

3) ಏಳು ಹನ್ನೊಂದಾಗು

4) ನೆಲಸಮ ಮಾಡು

23. ಭಾಷೆ ಬೋಧನೆಯ ಪ್ರಧಾನ ಉದ್ದೇಶ:

1) ಲಿಖಿತ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸುವುದು

2) ಮೌಖಿಕ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸುವುದು

3) ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸುವುದು

4) ಆಲಿಸುವ, ಮಾತನಾಡುವ ಸಾಮರ್ಥ್ಯ ಬೆಳೆಸುವುದು

24. ಒಂದನೆಯ ತರಗತಿಯ ಅಂತ್ಯದಲ್ಲಿ ಮಗು ಗ್ರಹಿಸಿ, ಅರ್ಥೈಸಿಕೊಳ್ಳಬೇಕಾದ ಒಟ್ಟು ಪದಗಳು:

1) ಸುಮಾರು ಒಂದು ಸಾವಿರ

2) ಸುಮಾರು ಒಂದೂವರೆ ಸಾವಿರ

3) ಸುಮಾರು ಎರಡು ಸಾವಿರ

4) ಸುಮಾರು ಎರಡೂವರೆ ಸಾವಿರ

25. ಭಾಷಾ ಪ್ರಯೋಗಶಾಲೆ ಎಂದು ಇದನ್ನು ಕರೆಯುತ್ತಾರೆ.

1) ಭಾಷೆಯನ್ನು ಪ್ರಯೋಗಕ್ಕೆ ಒಳಪಡಿಸುವ ಕೊಠಡಿ

2) ವಿದ್ಯುನ್ಮಾನ ಬೋಧನೋಪಕರಣಗಳಿಂದ ಕೂಡಿದ ಕೊಠಡಿ

3) ವಿದ್ಯಾರ್ಥಿ – ಶಿಕ್ಷಕರನ್ನೊಳಗೊಂಡ ಭಾಷಾ ಕೊಠಡಿ

4) ಕಂಪ್ಯೂಟರ್, ಟಿ.ವಿ. ರೇಡಿಯೋ ಹೊಂದಿರುವ ತರಗತಿ ಕೊಠಡಿ

26. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಪ್ರಧಾನ ಉದ್ದೇಶ:

1) ಮಕ್ಕಳ ಫಲಿತಾಂಶ ನಿರ್ಧರಿಸುವುದು

2) ಮಕ್ಕಳ ಪಠ್ಯ ಸಾಧನೆಯನ್ನು ಗುರುತಿಸುವುದು

3) ಮಕ್ಕಳನ್ನು ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಳ್ಳುವುದು

4) ಮಕ್ಕಳ ಕಲಿಕೆಯನ್ನು ಶ್ರೇಣೀಕರಿಸುವುದು

27. 'ತಲೆದೂಗು' ಈ ನುಡಿಗಟ್ಟಿನ ಅರ್ಥ

1) ಮೆಚ್ಚುಗೆ ಸೂಚಿಸು

2) ತಲೆಯನ್ನು ತೂಗು

3) ವಿರೋಧ ವ್ಯಕ್ತ ಪಡಿಸು

4) ಒಪ್ಪಿಗೆ ಸೂಚಿಸು

28. 3ನೇ ತರಗತಿಯ ವಿದ್ಯಾರ್ಥಿಯೊಬ್ಬ 4ನೇ ತರಗತಿಗೆ ಬಂದಾಗ ಅವನಲ್ಲಿ ನಿರೀಕ್ಷಿತ ಸಾಮರ್ಥ್ಯಗಳ ಕಲಿಕೆಯಾಗದಿದ್ದಲ್ಲಿ, ಕೊರತೆಗಳನ್ನು ತುಂಬಲು ಮಾಡಬಹುದಾದ ಚಟುವಟಿಕೆ:

1) ಪರಿಹಾರ ಬೋಧನೆ ಮಾಡುವುದು

2) ಮರುಭೋಧನೆ ಮಾಡುವುದು

3) ಕಂಠಪಾಠ ಮಾಡುವುದು

4) ಹಿಂದಿನ ತರಗತಿಗೆ ಕಳುಹಿಸುವುದು

29. ಭಾಷಾ ಬೋಧನೆಗೆ ಉತ್ತಮ ಕಲಿಕಾ – ಬೋಧನೋಪಕರಣಗಳು

1) ದೃಕ್ ಉಪಕರಣಗಳು

2) ಶ್ರವಣೋಪಕರಣಗಳು

3) ಚಾರ್ಟುಗಳು

4) ದೃಕ್ – ಶ್ರವಣೋಪಕರಣಗಳು

30. ಯಶಸ್ವಿ ತರಗತಿ ಪ್ರಕ್ರಿಯೆಗೆ ಸೂಕ್ತವಾದ ಚಟುವಟಿಕೆ ಹಂತಗಳ ಕ್ರಮಬದ್ದ ಜೋಡಣೆ:

ಎ. ಕಲಿಕಾ ಪೂರಕ ಹಂತ

ಬಿ. ಕಲಿಕಾಂಶ ಹಂತ

ಸಿ. ಅಭ್ಯಾಸ ಹಂತ

ಡಿ. ಬಳಕೆ ಹಂತ

ಇ. ಪೂರ್ವ ಸಿದ್ದತಾ ಹಂತ

ಎಫ್. ಮೌಲ್ಯಮಾಪನ ಹಂತ

1) ಎ, ಬಿ, ಸಿ, ಡಿ, ಎಫ್

2) ಇ, ಎ, ಬಿ, ಸಿ, ಡಿ, ಎಫ್

3) ಎ, ಇ, ಬಿ, ಸಿ, ಡಿ, ಎಫ್

4) ಇ, ಎ, ಬಿ, ಡಿ, ಸಿ, ಎಫ್

## ಉತ್ತರಗಳು

| | | | | | | |
|---|---|---|---|---|---|---|
| 1.3 | 2. 2 | 3. 2 | 4. 1 | 5. 4 | 6. 3 | 7.2 |
| 8. 2 | 9.3 | 10.4 | 11.4 | 12.3 | 13.3 | 14.2 |